# ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

## ಸಿ.ಸಿ.ನಂಃ 1216/15

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಪ್ರವೀಣ | | **ಸಿ.ಡಬ್ಲ್ಯೂ ಃ 2** |
| **ತಂದೆ ಹೆಸರು** | ಃ ಸ್ವಾಮಿ | | **ಪಿ.ಡಬ್ಲ್ಯೂ ಃ 3** |
| **ವಯಸ್ಸು** | ಃ 36 ವರ್ಷ | **ಪ್ರಮಾಣೀಕರಿಸಿದ ದಿಃ 28/11/2019** | |
| **ವೃತ್ತಿ** | ಃ ಎ.ಡಿ.ಒ, ಹೊನಪುರ ಎಂ.ಎಸ್.ಐ.ಎಲ್ | | |
| **ವಾಸ** | ಃ ಶ್ರೀರಾಮ ದೇವರ ಕಟ್ಟೆ | | |

**ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ ಯವರಿಂದ**

ಚಾ.ಸಾ 1, 3 ಮತ್ತು 4 ರವರು ನನಗೆ ಗೊತ್ತು. ಅವರು ಸಹ ನಮ್ಮ ಅಂಗಡಿಯಲ್ಲಿ ಕೆಲಸ ಮಾಡುತ್ತಾರೆ. ನಾನು 2010 ರಿಂದ ಇಲ್ಲಿಯವರೆಗೆ ಹೊನಪುರದ ಎಂ.ಎಸ್.ಐ.ಎಲ್ ಮಧ್ಯ ಮಳಿಗೆಯಲ್ಲಿ ಎಡಿಒ ಆಗಿ ಕೆಲಸ ಮಾಡುತ್ತಿದ್ದೇನೆ. ಚಾ.ಸಾ 1 ರವರು ಅಂಗಡಿಯ ಉಸ್ತುವಾರಿ ಆಗಿದ್ದಾರೆ. ನಾನು ಮತ್ತು ಚಾ.ಸಾ 3 ಹಾಗೂ 4 ರವರ ಅಂಗಡಿಯ ಹಣಕಾಸಿನ ವ್ಯವಹಾರ ನೋಡಿಕೊಳ್ಳುತ್ತೇವೆ. ನಾವುಗಳು ಬೆಳಿಗ್ಗೆ 11 ರಿಂದ ರಾತ್ರಿ 10 ರವರೆಗೆ ವ್ಯಾಪಾರ ಆದ ಹಣವನ್ನು ಅಂಗಡಿಯ ಕ್ಯಾಶ್ ಕೌಂಟರನಲ್ಲಿ ಇಟ್ಟು ಮರು ದಿನ ಅದನ್ನು ಬ್ಯಾಂಕಿಗೆ ಜಮೆ ಮಾಡುತ್ತೇವೆ.

ದಿಃ 15.11.2014 ರಂದು ನಾನು ಮತ್ತು ಚಾ.ಸಾ 4 ರವರು ಬೆಳಿಗ್ಗೆ 11 ರಿಂದ ರಾತ್ರಿ 10 ಗಂಟೆಯವರೆಗೆ ವ್ಯಾಪಾರ ಮುಗಿಸಿಕೊಂಡು ಆ ದಿನದ ಮಾರಾಟದ ಹಣವಾದ 2,64,229/- ರೂಗಳನು ಅಂಗಡಿಯಲಿ ಇಟ್ಟು ಬೀಗ ಹಾಕಿಕೊಂಡು ಹೋಗಿದ್ದೇವು. ನಾನು ವತುತ್ತು ಚಾ.ಸಾ 4 ರವರು ಮರು ದಿನ ಬೆಳಿಗ್ಗೆ 11 ಗಂಟೆಗೆ ಹೋಗಿ ಅಂಗಡಿ ಬಾಗಿಲು ತೆರೆದು ನೋಡಲಾಗಿ ಕ್ಯಾಶ್ ಕೌಂಟರ್ ನಲ್ಲಿದ್ದ ಹಣ ಇರಲಿಲ್ಲ ಮತ್ತು ಅಂಗಡಿಯ ಹಿಂಭಾಗದ ಗೋಡೆಯನ್ನು ಒಡೆಯಲಾಗಿತ್ತು. ಅಂಗಡಿಯಲ್ಲಿದ್ದ 1 ನೋಕಿಯಾ ಮೊಬೈಲ ಸಹ ಇರಲಿಲ್ಲ. ನಾವುಗಳು ಈ ಬಗ್ಗೆ ಚಾ.ಸಾ 1 ರವರಿಗೆ ತಿಳಿಸಿರುತ್ತೇವೆ. ನಂತರ ಚಾ.ಸಾ 1 ರವರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿರುತ್ತಾರೆ ಹಾಗೂ ಮೇಲಾಧಿಕಾರಿಯಾದ ಜಗಧೀಶರವರಿಗೆ ತಿಳಿಸಿರುತ್ತಾರೆ. ಘಟನೆಯ ಬಗ್ಗೆ ಚಾ.ಸಾ 1 ರವರು ದೂರು ನೀಡಿರುತ್ತಾರೆ. ಪೋಲಿಸರು ಈ ಬಗೆ ನನ್ನ ಹೇಳಿಕೆ ಪಡೆದುಕೊಂಡಿದ್ದಾರೆ.

**ಪಾಟೀ ಸವಾಲುಃ** ಶ್ರೀ ಬಿ.ಹೆಚ್.ವಿ ವಕೀಲರಿಂದ

ದಿಃ 15.11.2014 ರಂದು ನಾನು ಮತ್ತು ಚಾ.ಸಾ 4 ರವರು ಅಂಗಡಿಯ ಬೀಗ ಹಾಕಿಕೊಂಡು ಹೋಗಿದ್ದೇವು. ನಮ್ಮ ಮಳಿಗೆಯ ಅಕ್ಕಪಕ್ಕ ಪೆಟ್ರೋಲ್ ಪಂಪ, ಹಲವು ಅಂಗಡಿಗಳು ಮತ್ತು ಮರದ ಮಿಲ್

ಇದೆ ಎಂದರೆ ಸರಿ. ಅಲ್ಲಿ ರಾತ್ರಿಯೂ ಸಹ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ಸರಿ. ರಾತ್ರಿ ಯಾವುದಾದರು ಘಟನ ಆಗಿದೆ ಅಕ್ಕಪಕ್ಕದವರಿಗೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಚಾ.ಸಾ 1 ರವರು ಅಂಗಡಿಗೆ ಬಂದು ಎಷ್ಟು ಮದ್ಯ ದಾಸ್ತಾನು ಕಳುವಾಗಿದೆ ಎಂಬುದನ್ನು ಲೆಕ್ಕ ಮಾಡಿದ್ದಾರೆ. ನನಗ ಯಾವುದೆ ವಿಚಾರ ಗೊತ್ತಿಲ್ಲದ್ದರು ಚಾ.ಸಾ 1 ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಶ್ರೀ ಬಿ.ಎನ್.ಆರ್ ವಕೀಲರಿಂದ

ಪೋಲಿಸರು ನನ್ನ ಹೇಳಿಕೆಯನ್ನು ಬರವಣಿಗೆ ಮಾಡಿಕೊಂಡಿದ್ದಾರೆ. ಹೇಳಿಕೆಯನ್ನು ನಾನು ಓದಿ ನೋಡಿಲ್ಲ.

ಉಳಿದ ಆರೋಪಿತರ ಪರವಾಗಿ ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವಂತೆ ಕೋರಿಕೊಂರುತ್ತಾರೆ.

<u>ಮರು ವಿಚಾರಣೆ ಇಲ್ಲಃ</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಜೆ.ಎಂ.ಎಫ್.ಸಿ, ಹೊಳೆನರಸೀಪುರ.